



ಮನೆಯಂಗಳದಲ್ಲಿ ನವಿಲಿಗೆ ಆಹಾರ ನೀಡುತ್ತಿರುವ ಶ್ರೀಲಕ್ಷ್ಮಿ

ಅಂಗಳಕ್ಕೆ ಬರುತ್ತಲೇ ಕೂಗುತ್ತಿದ್ದರೆ ಅದಕ್ಕೆ ತುಂಬಾ ಹಸಿವಾಗಿದೆ ಎಂದರ್ಥ.

ಅದಾಗಲೇ ಅಂಗಳದಲ್ಲಿ ಅಕ್ಕಿ ಸುರಿದಿಟ್ಟಿದ್ದರೆ ತನ್ನ ಪಾಡಿಗೆ ತಿಂದುಕೊಂಡು ಹೋಗುತ್ತದೆ. ಏನೂ ಕಾಣದಿದ್ದರೆ 'ನಂಗೆ ಊಟಕ್ಕೆ ಇಟ್ಟಿಲ್ವೇ ಇನ್ನೂ? ಹೊಟ್ಟೆ ಹಸಿದಿದೆ' ಎನ್ನುವಂತೆ ಧ್ವನಿ ಹೊರಡಿಸಿ ಕೂಗಿ ಕರೆಯುತ್ತದೆ. ಕೂಗಿ ಕರೆಯದಿದ್ದರೆ ಹೊಟ್ಟೆ ತುಂಬಿದೆ ಎಂದರ್ಥ. ಊಟದ ಬಳಿಕ ಅಂಗಳದಲ್ಲಿ ಸುಮ್ಮನೇ ಸುತ್ತಾಡಿ, ಮನಬಂದರೆ ಗರಿಬಿಚ್ಚಿ ಕುಣಿದ ಮೇಲೆ ಕಾಡಿಗೆ ತೆರಳುವುದು ಅದರ ದೈನಿಕ.

'ನಮ್ಮನೆ ಹತ್ತಿರ ನವಿಲುಗಳ ಹಿಂಡು ಕಳೆದ ಏಳೆಂಟು ವರ್ಷಗಳಿಂದ ಕಾಣಸಿಕೊಳ್ಳುತ್ತಿವೆ. ಮೊದಲು ಮನೆ ಎದುರಿನ ಗೇಟಿನ ಹೊರಗಷ್ಟೇ ಅಡ್ಡಾಡುತ್ತಿದ್ದವು. ಎರಡು ವರ್ಷಗಳ ಹಿಂದೆ ಒಂದು ದಿನ ಗಂಡು ನವಿಲೊಂದು ಮನೆಯಂಗಳಕ್ಕೆ ಮೆಲ್ಲನೆ ಬಂತು. ಆ ದಿನ ಆದ ಖುಷಿಗೆ ಎಣೆಯುಂಟೆ? ಅಲ್ಲಿಂದ ಮತ್ತೆ ಮತ್ತೆ ಈ ನವಿಲು ಬರುವುದು ಶುರು. ನಾನೊಂದು ದಿನ ಮುಷ್ಟಿ ಅಕ್ಕಿ ಹಾಕಿದೆ. ಅದರ ರುಚಿ ನೋಡಿದ ಮೇಲೆ ದಿನವೂ ಮನೆ ಬಾಗಿಲಿಗೆ ನವಿಲಿನ ಹಾಜರಿ ಗ್ಯಾರಂಟಿ...' ಎಂದು ಶ್ರೀಲಕ್ಷ್ಮಿ ಖುಷಿಯಿಂದ ವರ್ಣಿಸುತ್ತಾರೆ.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎಸ್ಸಿ (ಕೆಮಿಸ್ಟ್ರಿ) ಓದುತ್ತಿರುವ ಶ್ರೀಲಕ್ಷ್ಮಿ ನವಿಲಿಗೆ ಕೈಯಾರೆ ಆಹಾರ ತಿನ್ನಿಸಿ ಖುಷಿಪಡುತ್ತಾರೆ. ನವಿಲಿನ ಈ ದೈನಿಕಕ್ಕೆ ಮನೆಯವರೆಲ್ಲ ಮನಸೋತಿದ್ದಾರೆ.

'ಮೊದಲು ತುಸು ಅಂಜಿಕೆಯಿಂದ. ನಾವು ಮರೆಯಾದಾಗ ಅಕ್ಕಿ ತಿಂದುಕೊಂಡು ಹೋಗುತ್ತಿದ್ದ ಈ ನವಿಲು ಈಗ ಅಳುಕು ಮರೆತಿದೆ. ರೊಟ್ಟಿ, ಚಪಾತಿ, ಕರಿದ ತಿಂಡಿಗಳನ್ನು ನೀಡಿದರೂ ತಿನ್ನುತ್ತದೆ. ನನ್ನ ಅಮ್ಮನೂ ಇದಕ್ಕೆ 'ನನ್ನ ಮಗಾ' ಅಂತ ಕಕ್ಕುಲಾತಿಯಿಂದ ಅಕ್ಕಿ ತಿನ್ನಿಸುತ್ತಾಳೆ. ನಾವೆಲ್ಲ 'ಮಯೂರ' ಎಂದು ಹೆಸರಿಟ್ಟು ಕರೆಯುವ ಈ ನವಿಲು, ಒಂದು ದಿನ ಮನೆಮುಂದೆ ಬಾರದೇ ಇದ್ದರೂ ಏನೋ ಮಿಸ್ ಮಾಡಿಕೊಂಡಿದ್ದೇವೆ ಅನಿಸುತ್ತದೆ' ಎನ್ನುತ್ತಾರೆ.

ಹಿಂಡಿನೊಟ್ಟಿಗೆ ಮನೆಯಾಚೆಗೆ ಓಡಾಡಿಕೊಂಡಿರುವ ಈ ನವಿಲು ಮನೆಯಂಗಳಕ್ಕೆ ಧೈರ್ಯವಾಗಿ ಬಂದು, ಕೂಗಿ ಕರೆದು, ಆಹಾರ ತಿಂದುಕೊಂಡು ಹೋಗುವುದು ಮಾತ್ರ ಒಂಟಿಯಾಗಿ. ಈ ನವಿಲು ಮನೆಯವರೊಂದಿಗೆ ಸಲ್ಲಾಪ ನಡೆಸುವಾಗ ಉಳಿದ ನವಿಲುಗಳು ಗೇಟಿನಾಚೆಗೆ ಇರುತ್ತವೆ. ಈ ನವಿಲು ಆಹಾರ ತಿಂದು, ಅಂಗಳದಲ್ಲಿ ಅಡ್ಡಾಡಿದ ನಂತರ ಮತ್ತೆ ತನ್ನ ಹಿಂಡಿನೊಟ್ಟಿಗೆ ಸೇರಿಕೊಳ್ಳುತ್ತದೆ.

ಚಳಿಗಾಲದಲ್ಲಿ ನವಿಲಿಗೆ ಪುಕ್ಕ ಉದುರುತ್ತದೆ. ಪುಕ್ಕ ಉದುರಿದರೆ, ಮತ್ತೆ ಸಾವಿರ ಕಣ್ಣುಗಳ ಉದ್ದನೆಯ ಗರಿಗಳು ಬಂದ ಮೇಲೆಯೇ ಮನೆಯಂಗಳಕ್ಕೆ ಓಡಿಬರುವುದು! ಇದೊಂದು ಅಚ್ಚರಿಯ ನಡವಳಿಕೆ ಎನ್ನುತ್ತಾರೆ ಮನೆಯವರು.

'ಎಲ್ಲರ ಮನೆಗೂ ಒಂದಿಲ್ಲೊಂದು ಪ್ರಾಣಿ ಪಕ್ಷಿ ಬಂದೇ ಬರುತ್ತದೆ. ಅವುಗಳನ್ನು ಹೆದರಿಸಿ ಓಡಿಸದೆ, ನಮ್ಮ ಕೈಲಾದ್ದು ನೀಡಿದರೆ ಅವುಗಳ ಪ್ರೀತಿ ಗಳಿಸಬಹುದು, ಜೊತೆಗೆ ನಾವೂ ಖುಷಿಪಡಬಹುದು' ಎನ್ನುತ್ತಾರೆ ಶ್ರೀಲಕ್ಷ್ಮಿ.

ಪ್ರತಿಕ್ರಿಯಿಸಿ: **feedback@sudha.co.in**